# ಚಾಲಾಕಿ

■ ರಾಮಕೃಷ್ಣ ಗೋಖಲೆ

ಅವಂತಿಕಾಪುರ ಎಂಬ ರಾಜ್ಯ ಇತ್ತು. ಆ ದೇಶದ ದೊರೆ ಶೂರಸೇನ ಅದನ್ನು ಆಳುತ್ತಿದ್ದ. ಆತನ ಆಸ್ಥಾನದಲ್ಲಿ ಅಪ್ರತಿಮ ಚತುರರು, ಮೇಧಾವಿಗಳು ಇದ್ದರು. ಎಂತಹ ಜಟಿಲ ಸಮಸ್ಯೆಯೇ ಇದ್ದರೂ ಅದನ್ನು ತರ್ಕಬದ್ಧವಾಗಿ ವಿಮರ್ಶೆಮಾಡಿ ಅಂತಿಮ ರೂಪ ನೀಡುತ್ತಿದ್ದರು.

ಹೀಗಿರುವಾಗ ಒಮ್ಮೆ ಯಾವುದೋ ವಿಷಯದ ಕುರಿತು ಯೋಚಿಸುತ್ತಿರುವಾಗ ಶತಮಾನಗಳಿಂದಲೂ ಕೇಳಿಬರುತ್ತಿರುವ ಸಮಸ್ಯೆಗೆ ಪರಿಹಾರವನ್ನು ತಮ್ಮ ರಾಜ್ಯದ ಆಸ್ಥಾನದ ವಿದ್ವಾಂಸರಿಂದ ಪಡೆದು ವಿಶ್ವಕ್ಕೆ ನೀಡಿದರೆ ಸೂರ್ಯ–ಚಂದ್ರ ಇರುವವರೆಗೂ ತನ್ನ ರಾಜ್ಯದ ಹೆಸರು ಅಜರಾಮರ ಆಗಿರುತ್ತದೆ ಎಂಬ ಆಸೆ ರಾಜನಲ್ಲಿ ಮೂಡಿತು.

ರಾಜನು, ತನ್ನ ಒಡ್ಡೋಲಗದಲ್ಲಿ ತನ್ನ ಮನದ ಇಂಗಿತವನ್ನು ಅರುಹಿದನು. ಜಗತ್ತು ಹುಟ್ಟಿದಾಗಿನಿಂದಲೂ ಬಗೆಹರಿಸಸಲು ಆಗಲಾರದ ಸಮಸ್ಯೆಯನ್ನು ತಾವು ಒಮ್ಮತದಿಂದ ಬಿಡಿಸಿದರೂ ಬೇರೆಲ್ಲ ರಾಜ್ಯದ ಜನ ನಿಸ್ಸಂದೇಹವಾಗಿ ಅದನ್ನು ಒಪ್ಪಲಾರರು ಎಂದೂ ಅನಿಸಿತು.

ಆದರೂ ರಾಜ ತನ್ನ ಸಮಸ್ಯೆಯನ್ನು ಸಭೆಯಲ್ಲಿ ಮಂಡಿಸಿದ. 'ಬೀಜ ಮೊದಲೋ ಗಿಡ ಮೊದಲೋ' ಎಂದು ಮಂತ್ರಿಗಳ ಅಭಿಪ್ರಾಯ ಕೇಳಿದ. ಬೀಜವೇ ಮೊದಲು ತದನಂತರ ಗಿಡ ಮರ. ಬೀಜ ಇಲ್ಲದೆ ಯಾವುದೇ ಗಿಡಗಳ ಸೃಷ್ಟಿ ಸಾಧ್ಯವಾಗುವುದಿಲ್ಲ. ಹಾಗಾಗಿ ಈ ವಾದವೇ ಸಮಂಜಸ ಎನ್ನಬಹುದು. ಈ ವಾದವನ್ನು ಅಲ್ಲಗಳೆಯುವವರು ಸಭೆಯಲ್ಲಿ ಎಲ್ಲರೂ ಒಪ್ಪುವಂತೆ ತಮ್ಮ ವಾದವನ್ನು ಮಂಡಿಸಬಹುದು. ಮಂಡಿಸಿ ಯಶಗಳಿಸಿದ ಮೇಧಾವಿಗೆ 500 ಚಿನ್ನದ ನಾಣ್ಯಗಳ ಬಹುಮಾನ ನೀಡಿ ಸನ್ಮಾನಿಸುವುದಾಗಿ ಘೋಷಿಸಿದ.

ಸಭೆಯಲ್ಲಿ ಗುಸುಗುಸು ಪ್ರಾರಂಭವಾಗಿ ಅವರವರಲ್ಲೇ ಚರ್ಚಿಸಿದರು. ಕೆಲವರು ಬೀಜ ಎಂದು, ಇನ್ನೂ ಕೆಲವರು ಮರವೇ ಮೊದಲೆಂದು ವಾದಿಸುತ್ತಿದ್ದರು. ನಿರ್ದಿಷ್ಟವಾಗಿ ಒಮ್ಮತಕ್ಕೆ ಬರಲು ಸಾಧ್ಯವಾಗದೆ ಸುಮ್ಮನಾದರು. ಯಾರಾದರೂ ಉತ್ತರಿಸಬಹುದು ಎಂಬ ನಿರೀಕ್ಷೆಯಲ್ಲಿ ಸುಮ್ಮನೆ ಕುಳಿತರು. ಯಾರೊಬ್ಬರೂ ಮಾತನಾಡದೆ ಮೌನವಹಿಸಿದ್ದರಿಂದ ರಾಜನಿಗೂ ಚಿಂತೆಯಾಯಿತು.

ಅಷ್ಟರಲ್ಲಿ ರಾಜನ ಹತ್ತಿರ ಏನಾದರೂ ಸಹಾಯ ಬೇಡಲು ಒಬ್ಬ ವ್ಯಕ್ತಿ ಬಂದದಿದ್ದ. ಆತ ತನ್ನ ಬಡತನ ನೀಗಿಸಿಕೊಳ್ಳಲು ಒಳ್ಳೆಯ ಸುಸಂದರ್ಭ ಇದು ಎಂದು ಏನಾದರೂ ಉಪಾಯ ಮಾಡಿ ಬಹುಮಾನ ಗೆಲ್ಲಲು ನಿರ್ಧರಿಸಿದ. ಇದರಿಂದ ಬಡತನ ಸ್ವಲ್ಪ ಮಟ್ಟಿಗಾದರೂ ದೂರಸರಿಯಬಹುದು ಎಂದು ಯೋಚಿಸಿದ.

ರಾಜ್ಯಸಭೆಯ ಮುಂದೆ ಬಂದು ನಿಂತ ಆತ ಈ ಸಮಸ್ಯೆಗೆ ತಾನು ಉತ್ತರ ನೀಡುವುದಾಗಿ ಹೇಳಿದ. ಆದರೆ, ತಾನು ನೀಡಿದ ಉತ್ತರವನ್ನು ಯಾರಾದರೂ ಆಧಾರ ಸಹಿತ ಅಲ್ಲಗಳೆದು, ಅದನ್ನು ಸಭೆ ಒಮ್ಮತದಿಂದ ಅಂಗೀಕರಿಸಿದರೆ, ಅಂತವರಿಗೆ ತನ್ನಲ್ಲಿರುವ ನೂರು ಚಿನ್ನದ ನಾಣ್ಯಗಳನ್ನು ನೀಡುವುದಾಗಿ, ತನ್ನಿಲ್ಲಿದ್ದ ಸಣ್ಣ ಗಂಟನ್ನು ಎಲ್ಲರಿಗೂ ಕಾಣುವಂತೆ ಎತ್ತಿ ತೋರಿಸಿದ. ತನ್ನ ಉತ್ತರವನ್ನು ಒಪ್ಪದೇ, ಅದು ಸರಿಯಲ್ಲ ಎಂದು ಸಾಧಿಸದಿದ್ದರೆ ಅವರು ಮತ್ತು ಅವರನ್ನು ಬೆಂಬಲಿಸಿದವರು ತನಗೆ ತಲಾ 500 ಚಿನ್ನದ ನಾಣ್ಯಗಳನ್ನು ಕೊಡಬೇಕಾಗುತ್ತದೆ. ಮಹಾರಾಜರು ಈ ಷರತ್ತುಗಳನ್ನು ಒಪ್ಪಿದರೆ ಮಾತ್ರ ಪ್ರಾಮಾಣಿಕವಾಗಿ ಉತ್ತರ ಹೇಳುವುದಾಗಿ ಕೈಜೋಡಿಸಿ ನಿಂತ.


ಅವನ ಮಾತು ಕೇಳಿ ಸಭೆ ಸ್ವಲ್ಪ ಹೊತ್ತು ಮೌನವಾಯಿತು. ರಾಜನು, ಅನಿವಾರ್ಯವಾಗಿ ಆತನ ಷರತ್ತುಗಳನ್ನು ಒಪ್ಪಿರುವುದಾಗಿ ತಿಳಿಸಿ ಉತ್ತರಿಸಲು ಅನುವು ಮಾಡಿಕೊಟ್ಟನು.

ಆಗ ಆ ವ್ಯಕ್ತಿ ತಾನು ಹೆಚ್ಚು ದೇಶಸುತ್ತಿಲ್ಲ, ಕೋಶ ಓದಿಲ್ಲ. ಇದು ಪ್ರತಿಯೊಬ್ಬರಿಗೂ ಗೊತ್ತಿರುವ ಸಂಗತಿ. ನೀವೆಲ್ಲರೂ ತಿಳಿದಂತೆ ಮೊದಲು ಜಗತ್ತನ್ನು ದೇವರು ಸೃಷ್ಟಿಸಿದ. ಸೃಷ್ಟಿಯೊಂದಿಗೆ ಗಿಡ–ಮರ, ಜೀವ ಜಗತ್ತು ಬೆಳೆಯಿತು. ಗಿಡದಲ್ಲಿ ಹೂವು, ಕಾಯಿ–ಹಣ್ಣಾಗಿ ನಂತರ ಬೀಜ ಉತ್ಪತ್ತಿಯಾಯಿತು. ತಾಯಿ ಇಲ್ಲದೇ ಮಗು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಗಿಡವಿಲ್ಲದೆ ಬೀಜ ಆಗಲು ಸಾಧ್ಯವಿಲ್ಲ. ಅನೇಕರ ದೃಷ್ಟಿಯಲ್ಲಿ ಬೀಜ ಮೊದಲು ಎಂದು ಇದ್ದರೂ ಅದನ್ನು ಪುರಾವೆ ಸಹಿತ ಮಂಡಿಸಲು ಆಧಾರವಿಲ್ಲ. ಮೊದಲು ಮರ ಎಂದು ವಾದಿಸುವವರು ಹಲವರಿರುತ್ತಾರೆ ಎಂದ.

ವಿನಾಕಾರಣ 500 ಚಿನ್ನದ ನಾಣ್ಯಗಳನ್ನು ದಂಡವಾಗಿ ಕೊಡಬೇಕಾಗುತ್ತದೆ. ಇದು ಅನಾದಿಯಿಂದಲೂ ಸಮಸ್ಯೆ ಆಗಿಯೇ ಇದೆ. ಗೊತ್ತಿದ್ದೂ ವಾದ ಮಾಡಿ ಸೋಲುವುದಕ್ಕಿಂತ ಸುಮ್ಮನೆ ಜಾಣರಾಗಿ ಕುಳಿತುಕೊಳ್ಳುವುದು ವಿಹಿತವೆಂದು ಸಭಿಕರು ಸುಮ್ಮನಾದರು.

ಆಗ ಅನಿವಾರ್ಯವಾಗಿ ಸಭೆ ಆ ಬಡವನ ಜಾಣತನವನ್ನು ಮೆಚ್ಚಿತು. ಗಿಡದಿಂದಲೇ ಬೀಜವೆಂಬ ವಾದಕ್ಕೆ ಒಪ್ಪಬೇಕಾಯಿತು. ರಾಜ ಆತನ ಜಾಣತನಕ್ಕೆ ಮೆಚ್ಚಿ, ಘೋಷಿಸಿದಂತೆ ಆತನಿಗೆ ಬಹುಮಾನ ನೀಡಿ ಸನ್ಮಾನಿಸಿದ.

(ಅಜ್ಜಿ ಕಥೆ)



ಚಿತ್ರ: ಸಂತೋಷ ಸಸಿಹಿತ್ಲು